ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056

ಸಂಖ್ಯೆ. ಎಸಿಎ-2/ವಿ.ವಿ.ಪ.ಸಾ ಸಭೆ/2020-21

ದಿನಾಂಕ: 28/05/2020

ಗೆ.

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 24/03/2020ರಂದು ನಡೆಯಬೇಕಾಗಿದ್ದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ (By Circulation) ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ದಿನಾಂಕ: 24/03/2020ರಿಂದ ಲಾಕ್‌ಡೌನ್ ಘೋಷಿಸಿದ್ದ ಕಾರಣದಿಂದ ದಿನಾಂಕ: 24/03/2020ರಂದು ನಡೆಯಬೇಕಾಗಿದ್ದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯನ್ನು ಮುಂದೂಡಿ ಕಾರ್ಯಸೂಚಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅಭಿಪ್ರಾಯವನ್ನು ದಿನಾಂಕ:30/03/2020ರ ಒಳಗಾಗಿ ಲಿಖಿತವಾಗಿ ತಿಳಿಸುವಂತೆ ಕೋರಲಾಗಿತ್ತು ಹಾಗೂ ತಮ್ಮ ಅಭಿಪ್ರಾಯವು ಸ್ವೀಕೃತವಾಗದಿದ್ದಲ್ಲಿ ತಮ್ಮ ಅನುಮೋದನೆ ಇರುವುದೆಂದು ಭಾವಿಸಲಾಗುವುದೆಂದು ತಿಳಿಸಲಾಗಿತ್ತು.

ಆದ್ದರಿಂದ ಸದರಿ ಕಾರ್ಯಸೂಚಿಗಳ ಬಗ್ಗೆ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.19ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ತಮ್ಮ ವಿಶ್ವಾಸಿ,

[signature]
ಕುಲಸಚಿವರು.
28/5/2020.

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು ವಿಶ್ವವಿದ್ಯಾಲಯ

ವಿದ್ಯಾವಿಷಯಕ ಪರಿಷತ್ತಿನ ಸಭೆಯ ಸುತ್ತೋಲೆ (Resolution by Circulation) ಮೂಲಕ ನಿರ್ಣಯ
ದಿನಾಂಕ: 19-05-2020

ಉಲ್ಲೇಖ: ವಿಶ್ವವಿದ್ಯಾಲಯದ ಸಭಾ ಸೂಚನಾ ಪತ್ರ ಸಂಖ್ಯೆ: ಎಸಿಎ-2/ ವಿ.ವಿ.ಪ.ಸಾ.ಸಭೆ/2019-20, ದಿನಾಂಕ: 23-03-2020.

***

ವಿಶ್ವವಿದ್ಯಾಲಯದ ಸಭಾ ಸೂಚನಾ ಪತ್ರ ದಿನಾಂಕ: 23-03-2020ರಲ್ಲಿ ಕಳುಹಿಸಿಕೊಡಲಾಗಿರುವ (By Circulation) ಕಾರ್ಯಸೂಚಿಗಳಿಗೆ ಸದಸ್ಯರುಗಳ ಅನುಮೋದನೆಯನುಸಾರ ಕೆಳಕಂಡಂತೆ ನಿರ್ಣಯಿಸಲಾಗಿದೆ.

**ವಿಷಯ ಸೂಚಿ: 01:** ದಿನಾಂಕ:30/12/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ವಿದ್ಯಾವಿಷಯಕ ಪರಿಷತ್ತು ದಿನಾಂಕ:30/12/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

**Item No.2:** To consider the reports of the Local Inquiry Committees in the matter of continuation of affiliation to Smt. Manjula Mallesh College of Education, Bengaluru for the years 2017-18, 2018-19 and 2019-20-reg.

**Resolution:**

In view of the continuation of recognition by the NCTE vide order dated: 07-02-2020 and orders of the Hon'ble High Court dated: 11-04-2019 passed in W.P. Nos.22511/2018 & 11995-12092/2019(EDN-RES), W.P.Nos.44389/2017 & 44483-44532/2017 (EDN-REG-P) and W.P. Nos.42601/2017 & 42852-4296/2017 (EDN-RES) and orders dated: 23-10-2019 in W.P.No.27993/2019 (EDN-RES) the

Academic Council considered the reports of the Local Inquiry Committees in the matter of continuation of affiliation to Smt. Manjula Mallesh College of Education, Bengaluru, for the years 2017-18, 2018-19 and 2019-20 and resolved to approve the same.

Item No.3: To consider the report of the Local Inquiry in the matter of continuation of affiliation to the Prince College of Education, Bengaluru for the year 2019-20-reg.

**Resolution:**

The Academic Council considered the report of the Local Inquiry submitted under the chairmanship of Prof. Narayanaswamy M, Dept. of Education, in the matter of continuation of affiliation to the Prince College of Education, Bengaluru for the year 2019-20 and resolved to approve the same.

**ವಿಷಯ ಸೂಚಿ: 04:** 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2020–21ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

2020–21ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ, 2020–21ನೇ ಸಾಲಿಗೆ ಕರ್ನಾಟಕ ಸರ್ಕಾರವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒದಗಿಸಿರುವ ಅನುದಾನದ ವಿವರ:

| | |
|---|---|
| 1) ವೇತನ ಬಾಬ್ತು | ರೂ. 11504–00 ಲಕ್ಷಗಳು |
| 2) ವಿಶ್ರಾಂತಿ/ಪಿಂಚಣಿ ಬಾಬ್ತು | ರೂ. 1447–00 ಲಕ್ಷಗಳು |
| 3) ಸಾಮಾನ್ಯ ಅನುದಾನ | ರೂ. 25–00 ಲಕ್ಷಗಳು |
| **ಒಟ್ಟು** | **ರೂ. 12976–00 ಲಕ್ಷಗಳು** |

2020–21ನೇ ಸಾಲಿನಲ್ಲಿ ಅಂದಾಜು ಸ್ವೀಕೃತಿ ರೂ.50300–03 ಲಕ್ಷಗಳು ಹಾಗೂ ಅಂದಾಜು ಒಟ್ಟು ಪಾವತಿಗಳು ರೂ.53570–68 ಲಕ್ಷಗಳಾಗಿದ್ದು ರೂ.3270–65 ಲಕ್ಷಗಳ ಕೊರತೆ ಆಯ-ವ್ಯಯವಾಗಿದ್ದು, 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2020–21ನೇ ಸಾಲಿನ ಆಯ-ವ್ಯಯ ಅಂದಾಜುಗಳನ್ನು ದಿನಾಂಕ 18–03–2020 ರಂದು ನಡೆದ ಹಣಕಾಸು ಸಮಿತಿ ಸಭೆಯ ಹಾಗೂ ದಿನಾಂಕ: 19–03–2020ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳೊಂದಿಗೆ ಪರಿಗಣಿಸಿ ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

**ವಿಷಯ ಸೂಚಿ: 05:** ಬೆಂಗಳೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನ ವರದಿಗೆ ನೀಡಿರುವ ಉತ್ತರಗಳ ಸಮೇತ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸುತ್ತಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ ಹಾಗೂ ಸದರಿ ವರದಿಗೆ ನೀಡಿರುವ ಉತ್ತರಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 47(4)ರ ಪ್ರಕಾರ ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿತು.

**ವಿಷಯ ಸೂಚಿ: 06:** ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ ಪದವಿಯಲ್ಲಿ ವ್ಯಾಸಂಗಮಾಡಿ ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು, ಅಂತಹ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶವನ್ನು ನೀಡುವ ಕುರಿತು.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ ಪದವಿಯಲ್ಲಿ ವ್ಯಾಸಂಗಮಾಡಿ ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು, ಅಂತಹ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶವನ್ನು ನೀಡುವ ಬಗ್ಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, 2014–15ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು, ಅಂತಹ ವಿಷಯಗಳನ್ನು ಜೂನ್/ಡಿಸೆಂಬರ್ 2020ರಲ್ಲಿ ನಡೆಯುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಮೇಲ್ಕಂಡ ಸಾಲಿನ

ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಮತ್ತೊಂದು ಅವಕಾಶವನ್ನು ನೀಡಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ಮುಂದುವರೆದು, 2014-15ಕ್ಕೂ ಹಿಂದಿನ ಸಾಲುಗಳಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದು ಅನುತ್ತೀರ್ಣಗೊಂಡಿರುವ ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಪದವಿಯನ್ನು ಪೂರ್ಣಗೊಳಿಸದ ಇತರ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ಬಗ್ಗೆ ವಿಸ್ತೃತ ಚರ್ಚೆಗೆ ಮುಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

<u>ವಿಷಯ ಸೂಚಿ: 07:</u> ಶ್ರೀ. ಬಿ ಬಸವಲಿಂಗಪ್ಪ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧ ಕರಡು ಪರಿನಿಯಮಾವಳಿಗಳನ್ನು ಸಲ್ಲಿಸುವ ಬಗ್ಗೆ.

<u>ನಿರ್ಣಯ:</u>

ಸಮಾಜ ಕಲ್ಯಾಣ ಇಲಾಖೆಯು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಬಿ. ಬಸವಲಿಂಗಪ್ಪ ಅವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಲು ಮಂಜೂರು ಮಾಡಿರುವ ಒಂದು ಕೋಟಿ ರೂಪಾಯಿಗಳ ಅನುದಾನದಿಂದ ಶ್ರೀ ಬಿ. ಬಸವಲಿಂಗಪ್ಪ ಅವರ ಬಗ್ಗೆ ಅಧ್ಯಯನ ನಡೆಸಲುನುವಾಗಲು ರಚಿಸಿರುವ "Sri B. Basavalingappa Institute for Development Studies (B-BIDS)" ಕರಡು ಪರಿನಿಯಮಾವಳಿಯನ್ನು ದಿನಾಂಕ:12-02-2020ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸೂಕ್ತ ಮಾರ್ಪಾಟು ಮಾಡಿ ಮರು ಮಂಡಿಸಬೇಕೆಂದು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

ಕುಲಸಚಿವರು 27/5/2020 | ಕುಲಪತಿಯವರು 27/5/2020